## ಪ್ರಬಂಧ

ಈಗಿನಷ್ಟು ಫಾಸ್ಟ್‌ರಿಲೀಫ್ ಮೆಡಿಸಿನ್ ಆಗಿನ ಸಮಯದಲ್ಲಿ ಎಲ್ಲಿಂದ ಬರಬೇಕು. ತಿಂಗಳಾನುಗಟ್ಟಲೇ ಬೆಡ್‌ರೆಸ್ಟ್ ಮತ್ತು ಡಾಕ್ಟರ್ ಹೇಳಿದಂತೆ ಎಚ್ಚರಿಕೆಯಿಂದ ಇರುವುದು– ಎರಡೇ ಆಗ ಅರಾಮಾಗುವ ಮಾರ್ಗಗಳು. ಮನೆಯಲ್ಲಿ ನನ್ನತ್ತೆಯ ಮಗಳು ಇದೇ ರೋಗಕ್ಕೆ ತುತ್ತಾಗಿ ತೀರಿಕೊಂಡಳು. ಅದರಗುಂಟ ಇದೇ ಸಂದರ್ಭ ನನಗೂ ಜ್ವರ ಶುರುವಾಯಿತು. ಅವಳು ಇಲ್ಲವಾದ ನೋವು ಮತ್ತು ರೋಗದ ಭಯಕ್ಕೆ ಜ್ವರಪೀಡಿತಳಾದ ನನ್ನ ಬಗ್ಗೆ ಕಾಳಜಿ ಹೆಚ್ಚಾಯಿತು. ಅಂತೆಯೇ ನೇರಳೆಕೆಂಪು ಮಿಶ್ರಿತ ಬಣ್ಣದ ನಾಲ್ಕು ರೂಪಾಯಿನೋ ಐದು ರೂಪಾಯಿನೋ ಇರಬೇಕು, ಒಂದು ಜೊತೆ ಪ್ಲಾಸ್ಟಿಕ್ ಚಪ್ಪಲಿಗಳು ನನ್ನ ಕೋಣೆಗೆ ಹೊಸಮಾನಗಿತ್ತಿಯಂತೆ ಬಂದವು. ಆಗೆಲ್ಲಾ ಬರೀಗಾಲಲ್ಲಿ ನಡೆಯುವುದಕ್ಕೆ ಯಾವ ನೋವು, ತೊಂದರೆ, ಸಂಕೋಚ, ಅಪಮಾನ ಆಗುತ್ತಿರಲಿಲ್ಲ. ಬದಲಾಗಿ ಬರಿಗಾಲಲ್ಲಿ ನಡೆಯುವುದರಿಂದ ಹೊಲಕ್ಕೆ ಹೋಗಿ ಕೆಲಸ ಮಾಡುವವರು ಸಹ ಅರೋಗ್ಯವೃದ್ಧಿ ಎಂದು ಹೇಳುವ, ಪಾಲಿಸುವ ಪರಿಪಾಠವಿತ್ತು. ನನ್ನ ಬದುಕಿನ ಮೊದಲ ಚಪ್ಪಲಿಗಳನ್ನು ನಾ ಹೇಗೆ ಮರೆತೇನು? ಯಾಕೋ ಈಗಲೂ ಅವುಗಳು ಸಿಂಡ್ರೆಲಾಳ ಗಾಜಿನ ಚಪ್ಪಲಿಯಂತೆ ನನ್ನ ಮನದಲ್ಲಿ ಉಳಿದು ನೆನಪಾಗಿ ಮುದ ನೀಡುತ್ತಲೇ ಇರುತ್ತವೆ. ಬಹುಶಃ 'ಟೈಫಾಯಿಡ್ ರೋಗ ಅಸವಾಲದ್ದು, ಅದು ಬಂತಂದ್ರ ಹೊತಗೊಂಡು ಹೋಗು ತನಾ ಬಿಡಂಗಿಲ್ಲಾ' ಅಂತ ಸತ್ತ ಮನೆಗೆ ಮಾತನಾಡಿಸಲು ಬಂದವರೆದುರು ನಮ್ಮ ಅಜ್ಜಿ ಹೇಳುತ್ತಿದ್ದುದು ಒಂದು ಕಾರಣವಾದರೆ, ಜುಣುಗುಡುವ ನೆಲದ ಮೇಲೆ ಕಾಲೂರಬಾರದು ಎಂದು, ಮಂಚದಿಂದ ಕಾಲುಗಳನ್ನು ಕೆಳಗಿಳಿಸಿದರೆ ಸಾಕು ಅವು ಚಪ್ಪಲಿಯ ಮೇಲೆಯೇ ಹೋಗಿ ನಿಲ್ಲಬೇಕು ಎನ್ನುವ ನನ್ನವ್ವನ ಹಾಗೂ ಮನೆಯ ಎಲ್ಲರ ಮೊದಲ ಕಾಳಜಿಯಾಗಿದ್ದು ಇನ್ನೊಂದು ಕಾರಣವಿರಬಹುದು. ನೀವೇನರ ಹೇಳ್ರಿ ಮೊದಲೆನ್ನುವ ಎಲ್ಲವೂ ಹಾಗೆಯೇ ಅಲ್ಲವೆ...

ಒಂದು ವಸ್ತು ಕೇವಲ ವಸ್ತುವಾಗಿ ಅಲ್ಲದೇ ಭಾಷೆಯನ್ನು ಶ್ರೀಮಂತಗೊಳಿಸುವ ನೆಲೆಯಲ್ಲಿ ಕೊಡಕೊಳ್ಳುವಿಕೆಯನ್ನು ಮಾಡುತ್ತದೆ ಎನ್ನುವುದನ್ನು ನಾವು ಮೆಚ್ಚಲೇಬೇಕು. ಆ ಮೂಲಕ ಹೊಸತನವನ್ನು ಕಟ್ಟಿಕೊಡುತ್ತದೆ. ಒಂದು ಗಾದೆ ಮಾತಿದೆ ಎಲ್ಲರಿಗೂ ಗೊತ್ತಿರುವಂಥದೆ, 'ಕೂಸು ಹುಟ್ಟೊ ಮುಂಚೆ ಕುಲಾವಿ ಹೊಲಿಸಿದ್ರಂತೆ' ಆದರೀಗ ಇದನ್ನು ಬಳಸುವುದು ಕಡಿಮೆಯಾಗಿದೆ. ಕುಲಾವಿಗಳನ್ನು ತೊಡುವವರಿಲ್ಲವಾದರೆ, ಹೊಲಿಯುವವರೆಲ್ಲಿಂದ ಬರಬೇಕು. ಕುಲಾವಿಗೆ ಬೇರೆ ರೂಪ ಕೊಟ್ಟು ಸಂಭ್ರಮಿಸಿ, ತೊಡುವ ಕಾಲದಲ್ಲಿ ಇಂದಿನ ಮಕ್ಕಳಿಗೆ ಕುಲಾವಿ ಕುಂಚಿಗೆ ಶಬ್ದಗಳು ಅಪರಿಚಿತವಾಗಿವೆ. ಅದಕ್ಕಿಂತಾ ಹೆಚ್ಚು ಊರಾಚೆ ಈ ವಸ್ತುಗಳನ್ನು ನಾವೇ ನೂಕಿಯಾಗಿದೆ. ಅದನ್ನೇ ಹೀಗೆ ಹೇಳಿದರೆ, ಹೇಗೆ 'ಕೂಸು ಹುಟ್ಟುವ ಮುಂಚೆ ಚಪ್ಪಲಿ ಕೊಂಡುಕೊಂಡರಂತೆ' ಅನ್ನುವಷ್ಟು ಚಪ್ಪಲಿಯ ಅಗತ್ಯ ಇಂದು ಕಂಡು ಬರುತ್ತಿದೆ. ಹುಟ್ಟಿದ ಮಗು ನಿರಾಳವಾಗಿ ಕೈಕಾಲು ಆಡಿಸುವ ಹಾಗಿಲ್ಲ. ಛಳಿಯಾಗುತ್ತದೆ, ಮಣ್ಣುಧೂಳು ಹತ್ತುತ್ತದೆ, ಇನ್ಫೆಕ್ಷನ್ ಆಗುತ್ತದೆ. ಇಂಥದೇ ಭಾವನೆಗಳು ಈಗಿನ ಜನರಲ್ಲಿ ಬೇರೂರಿ ಮೇಲಿನ ಹೊಸ ನಮೂನಿ ಗಾದೆಮಾತಿನ ಹುಟ್ಟಿಗೆ ಕಾರಣವಾಗಿವೆ. ಒಂದರ ಕೊನೆ ಇನ್ನೊಂದರ ಹುಟ್ಟಿಗೆ ಹಾದಿ ಮಾಡಿಕೊಡುವುದು ಪ್ರಕೃತಿ ನಿಯಮವೇ ಆಗಿದೆ. ಅದಕ್ಕೆಂದೇ ಚಂದನೆಯ, ಬೊಂಬೆ ಚಿತ್ರವಿರುವ, ಊಲನ್ನಿನ, ಪ್ಲಾಸ್ಟಿಕ್ಕಿನ, ರೆಗ್ಜಿನ್ನಿನ ಚಪ್ಪಲಿ ಹಾಗೂ ಬೂಟುಗಳು ಹುಟ್ಟಿದ ಮಗುವಿನ ಪುಟ್ಟ ಪಾದವನ್ನು ಅಲಂಕರಿಸುತ್ತಿವೆ. ಇದರಿಂದ ಮಗುವಿನ ಪಾದದ ಬೆಳವಣಿಗೆ ಕುಂಠಿತವಾಗುವ ವಿಚಾರ ಎಲ್ಲರಿಗೂ ಗೊತ್ತಿಲ್ಲ ಎಂದಲ್ಲ. ಗೊತ್ತಿದ್ದೂ ಏನು ಮಾಡಲು ಸಾಧ್ಯವಿದೆ ಹೇಳ್ರಿ? ಆಧುನಿಕತೆಯನ್ನು ಅಳವಡಿಸಿಕೊಳ್ಳದವರನ್ನು 'ಔಟ್ ಡೇಟೆಡ್' ಎಂದು ಜಗತ್ತು ನೋಡುವ ಸಮಯದಲ್ಲಿ, 'ಹತ್ತರೊಂದಿಗೆ ಹನ್ನೊಂದು' ಎನ್ನದೆ ಬೇರೆ ದಾರಿಯಿಲ್ಲ.

ಇದಲ್ಲದೆ ಚಪ್ಪಲಿಯನ್ನು ಕುರಿತು ದೊಡ್ಡವರ ವಿಚಾರಕ್ಕೆ ಬಂದರೆ, ಎಲ್ಲರಿಗಿಂತ ನಾವೇನು ಕಡಿಮೆ ಎನ್ನುವ, ಒಂದು ಜೊತೆಯೊಂದಿಗೆ ಇನ್ನೊಂದಿರಲಿ ಎನ್ನುವ ಮನೋಭಾವನೆ ದಿನಗೂಲಿ ದುಡಿಮೆಯವರಿಂದ ಹಿಡಿದು ಸಿರಿವಂತರವರೆಗೆ– ಎಲ್ಲರಾದಿಯಾಗಿ ಮನೆಮಾಡಿದೆ. ಕೆಲಸಕ್ಕೆ ಹೋಗುವಾಗ ತೊಡಲು ಒಂದು ಜೊತೆ ರಫ್ ಆಂಡ್ ಟಫ್ ಚಪ್ಪಲಿ, ಮಾರ್ಕೆಟ್ ಅಥವಾ ಫಂಕ್ಷನ್